ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2496
2)	ಸದಸ್ಯರ ಹೆಸರು	: ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3)	ಉತ್ತರಿಸಬೇಕಾದ ದಿನಾಂಕ	: 23-03-2022
4)	ಉತ್ತರಿಸಬೇಕಾದ ಸಚಿವರು	: ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಸರ್ಕಾರವು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಇಲಾಖೆಯಿಂದ ಅರ್ಹ ಮೀನುಗಾರರಿಗೆ ವಸತಿ ಯೋಜನೆಯನ್ನು ರೂಪಿಸಿದೆಯೇ; (ವಿವರ ನೀಡುವುದು)	ಹೌದು. ರಾಜ್ಯದ ನಿರ್ವಸತಿ ಮೀನುಗಾರರಿಗೆ ವಸತಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಮತ್ಸ್ಯಾಶ್ರಯ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಆ)	ರೂಪಿಸಿದ್ದಲ್ಲಿ, ಕಳೆದ 2 ವರ್ಷಗಳಲ್ಲಿ ಈ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು: (ವಿವರ ನೀಡುವುದು)	ಕಳೆದ 2 ವರ್ಷಗಳಲ್ಲಿ ಈ ಯೋಜನೆಗೆ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುವ ಅನುದಾನದ ವಿವರ ಕೆಳಕಂಡಂತಿದೆ:- ಜಿಲ್ಲೆ — ಅನುದಾನ (ಲಕ್ಷಗಳಲ್ಲಿ) ಕಲಬುರಗಿ — 7.58 ಯಾದಗಿರಿ — -
ಇ)	ಈ ಮೇಲ್ಕಂಡ ಯೋಜನೆಯಲ್ಲಿ ಕಳೆದ 2 ವರ್ಷಗಳಲ್ಲಿ ಹಂಚಿಕೆ ಮಾಡಲಾಗಿರುವ ಮನೆಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)	ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯಿಂದ ಹೊಸದಾಗಿ ಮನೆಗಳನ್ನು ಮಂಜೂರು ಮಾಡಿರುವುದಿಲ್ಲ. ಆದರೆ 2014-15ನೇ ಸಾಲಿನಿಂದ 2017-18ನೇ ಸಾಲಿನವರೆಗೆ ಮಂಜೂರಾಗಿ ಪ್ರಾರಂಭವಾಗದ ಮತ್ತು ಅನುಮೋದನೆಯಾಗಿ ಪ್ರಾರಂಭವಾಗದ 2581 ಮನೆಗಳನ್ನು 2018-19 ನೇ ಸಾಲಿಗೆ ಮರುಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿದೆ. 2018-19ನೇ ಸಾಲಿನಲ್ಲಿ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಿಗೆ ಹಂಚಿಕೆ ಯಾಗಿರುವ ಮನೆಗಳ ವಿವರಗಳು ಈ ಕೆಳಕಂಡತಿವೆ:- ಜಿಲ್ಲೆ — ಮನೆಗಳ ಸಂಖ್ಯೆ ಕಲಬುರಗಿ — 90 ಯಾದಗಿರಿ — 40

ಸಂಖ್ಯೆ: ಪಸಂಮೀ ಇ-105 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2496ಕ್ಕೆ

ಅನುಬಂಧ-1

ಮತ್ಸ್ಯಾಶ್ರಯ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಸರಿಸುತ್ತಿರುವ ಮಾನದಂಡಗಳು ಈ ಕೆಳಗಿನಂತಿರುತ್ತವೆ.

1) ಫಲಾನುಭವಿಯು ಹುಟ್ಟು/ವೃತ್ತಿಯಲ್ಲಿ ಮೀನುಗಾರನಾಗಿರಬೇಕು. ಮೀನುಗಾರಿಕೆಗೆ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಸಹ ಆಯ್ಕೆ ಮಾಡಬಹುದಾಗಿದೆ.

2) ಫಲಾನುಭವಿಯು ವಿವಾಹಿತನಾಗಿರಬೇಕು

3) ಫಲಾನುಭವಿಯು ಸ್ವಂತ ನಿವೇಶನ ಹೊಂದಿರತಕ್ಕದ್ದು

4) ಫಲಾನುಭವಿಯು ಸ್ಥಳೀಯ ಮೀನುಗಾರರ ಸಹಕಾರ ಸಂಘದ ಸದಸ್ಯನಾಗಿರಬೇಕು. ಇಲ್ಲದಿದ್ದಲ್ಲಿ ಕಳೆದ ಮೂರು ವರ್ಷಗಳಿಂದ ಮೀನುಗಾರಿಕೆಯಲ್ಲಿ ತೊಡಗಿರುವ ಬಗ್ಗೆ ಸಂಬಂಧಿಸಿದ ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರು ದೃಢೀಕರಿಸಬೇಕು

5) ಫಲಾನುಭವಿಯು ಸರ್ಕಾರದ ಇತರೆ ವಸತಿ ಯೋಜನೆಯಡಿ ಸೌಲಭ್ಯವನ್ನು ಪಡೆದಿರಬಾರದು. ಈ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ, ಮುನಿಸಿಪಾಲಿಟಿ, ನಗರ ಸಭೆ ಮುಂತಾದ ಸಂಸ್ಥೆಗಳಿಂದ ದೃಢೀಕರಣ ಹೊಂದಿರತಕ್ಕದ್ದು ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದವರಾಗಿರತಕ್ಕದ್ದು.

ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳಿಗೆ ಫಲಾನುಭವಿಗಳ ಆಯ್ಕೆಯನ್ನು ಸರ್ಕಾರದ ಆದೇಶ ಸಂಖ್ಯೆ.ಪಸಂಮೀ 112 ಮೀಇಯೋ 2007(ಭಾಗ), ಬೆಂಗಳೂರು,ದಿ:31-7-2008 ರಂತೆ ಆಯ್ಕೆ ಸಮಿತಿಯನ್ನು ರಚಿಸಿ ಆಯ್ಕೆಯನ್ನು ಮಾಡಲಾಗುತ್ತಿದೆ.

ಆಯ್ಕೆ ಸಮಿತಿಯ ವಿವರ

ಅಧ್ಯಕ್ಷರು: ಆಯಾ ವಿಧಾನ ಸಭಾ ಕ್ಷೇತ್ರದ ಶಾಸಕರು

ಸಹ ಅಧ್ಯಕ್ಷರು: ವಿಧಾನ ಪರಿಷತ್ತಿನ ಸದಸ್ಯರು (ಅವರ ವ್ಯಾಪ್ತಿಯ ಅಪೇಕ್ಷಿಸಿದ ಯಾವುದಾದರೊಂದು ವಿಧಾನ ಸಭಾ ಕ್ಷೇತ್ರಕ್ಕೆ ಸೀಮಿತವಾದಂತೆ)

ಸದಸ್ಯ ಕಾರ್ಯದರ್ಶಿ: ಸಂಬಂಧಿಸಿದ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)

ಮತ್ಸ್ಯಾಶ್ರಯ ಯೋಜನೆಯಡಿ ವಸತಿ ಸೌಲಭ್ಯವನ್ನು ಪಡೆಯುವ ಫಲಾನುಭವಿಯು ಮೇಲೆ ಪಟ್ಟಿ ಮಾಡಲಾದ ಅರ್ಹತೆಗಳ ಮೇರೆಗೆ ಆಯ್ಕೆ ಸಮಿತಿಯು ಕಾರ್ಯನಿರ್ವಹಿಸುತ್ತಿದೆ.

ಸಹಾಯಧನದ ವಿವರ:

ಮತ್ಸ್ಯಾಶ್ರಯ ಮನೆಯ ಕಾಮಗಾರಿಗಳನ್ನು ಅಡಿಪಾಯ, ಗೋಡೆ ಮತ್ತು ಛಾವಣಿ ಎಂದು 3 ವಿವಿಧ ಹಂತವನ್ನಾಗಿ ವಿಂಗಡಿಸಿದ್ದು, ಸದರಿ ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳಿಗೆ ನಿರ್ಮಿಸುವ ಮನೆ ಕಾಮಗಾರಿಯ ಹಂತಕ್ಕೆ ತಕ್ಕಂತೆ ಮೂರು ಕಂತುಗಳಲ್ಲಿ ಸಹಾಯಧನವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಸಹಾಯಧನವನ್ನು ಮೊದಲನೇ ಕಂತಿನಲ್ಲಿ ಶೇ:20 ರಷ್ಟು, ಎರಡನೇ ಕಂತಿನಲ್ಲಿ ಶೇ: 40 ರಷ್ಟು ಮತ್ತು ಮೂರನೇ ಕಂತಿನಲ್ಲಿ ಶೇ: 40 ರಷ್ಟು ನೀಡಲಾಗುವುದು. 2017-18

ನೇ ಸಾಲಿನಿಂದ ಈ ಯೋಜನೆಯಡಿಯಲ್ಲಿ ಪ್ರಸ್ತುತ ಗ್ರಾಮೀಣ ಪ್ರದೇಶದ ಸಾಮಾನ್ಯ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ರೂ. 1.20 ಲಕ್ಷ ಪರಿಶಿಷ್ಟಜಾತಿ/ಪಂಗಡ ಫಲಾನುಭವಿಗಳಿಗೆ ರೂ.1.75 ಲಕ್ಷ ಮತ್ತು ನಗರ ಪ್ರದೇಶದ ಪರಿಶಿಷ್ಟಜಾತಿ/ಪಂಗಡದ ಫಲಾನುಭವಿಗಳಿಗೆ ರೂ. 2.00 ಲಕ್ಷ ಸಹಾಯಧನವನ್ನು ಒದಗಿಸಲಾಗುತ್ತಿದೆ.

***